**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ :-** | **510/2011** |
| **ಸಿ.ಡಬ್ಲ್ಯೂ : -1** | **ಪಿ.ಡಬ್ಲ್ಯೂ - 1** |
| **ದಿನಾಂಕ :-** | **31.07.2026** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ1 ರಿಂದ 3 ಮತ್ತು 7 ರಿಂದ 10 ನೇ ಆರೋಪಿಗಳ ಪರ ಶ್ರೀ.ಎಸ್‌ವಿಎಂ ವಕೀಲರಿಂದ**

1 ನೇ ಆರೋಪಿ 4 ನೇ ಆರೋಪಿಯನ್ನು 2 ನೇ ಮದುವೆ ಮಾಡಿಕೊಂಡ ವಿಚಾರ ನನಗೆ ರಾಮಕೃಷ್ಣರೆಡ್ಡಿ ಮತ್ತು ದೇವರೆಡ್ಡಿಯವರಿಂದ ತಿಳಿದಿರುತ್ತದೆ. ಸದರಿ ವಿಚಾರ 1 ನೇ ಆರೋಪಿ 2 ನೇ ಮದುವೆಯಾದ 2-3 ತಿಂಗಳಿಗೆ ನನಗೆ ಹಾಗೂ ನನ್ನ ತಂದೆಯವರಿಗೆ ತಿಳಿದಿರುತ್ತದೆ. ಯಾವ ಸಂದರ್ಭದಲ್ಲಿ ತಿಳಿಯಿತು ಎಂದರೆ ಸಾಕ್ಷಿ, ಹಾಗೇ ಸುಮ್ಮನೇ ಮಾತನಾಡುತ್ತಿದ್ದಾಗ ತಿಳಿಯಿತು. ರಾಮಕೃಷ್ಣರೆಡ್ಡಿ ಮತ್ತು ದೇವರೆಡ್ಡಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ.

1 ನೇ ಆರೋಪಿ 4 ನೇ ಆರೋಪಿಯನ್ನು ಯಾವ ಸ್ಥಳದಲ್ಲಿ ಮದುವೆಯಾಗಿರುತ್ತಾರೆ ಎಂದರೆ ಸಾಕ್ಷಿ ಸರ್ಜಾಪುರ ಹೋಬಳಿಯ, ಎಸ್.ಮೇಡಹಳ್ಳಿ ಗ್ರಾಮದ ಶ್ರೀ ಸಿದ್ದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದಿರುತ್ತದೆ ಎಂದು ನನಗೆ ತಿಳಿದಿರುತ್ತದೆ. ಆಗ ಯಾರ್ಯಾರು ಇದ್ದರು ಎಂದು ನನಗೆ ಗೊತ್ತು. ಆಗ 2, 3, 7 ಮತ್ತು 8 ನೇ ಆರೋಪಿಗಳು ಹಾಗೂ 4 ನೇ ಆರೋಪಿಯ ತಂದೆ ಇದ್ದರು ಎಂದು ನನಗೆ ತಿಳಿದಿರುತ್ತದೆ. ಯಾರ ಮುಖಾಂತರ ಈ ವಿಚಾರ ನಿಮಗೆ ತಿಳಿಯಿತು ಎಂದರೆ ಸಾಕ್ಷಿ ನಾವೇ ಪತ್ತೆ ಹಚ್ಚಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. 1 ನೇ ಆರೋಪಿ 4 ನೇ ಆರೋಪಿಯನ್ನು 2 ನೇ ಮದುವೆಯಾದ ವಿಚಾರ ತಿಳಿದ ಮೇಲೆ ಪೊಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಆ ವಿಚಾರ ನನ್ನ ದೂರಿನಲ್ಲಿ ಹೇಳಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿರುವ ದೂರಿನ ದಿನಾಂಕಃ 30.05.2007 ಎಂದರೆ ಇರಬಹುದು. ನನಗೆ 1 ನೇ ಆರೋಪಿ 2 ನೇ ಮದುವೆಯಾಗಿರುವ ವಿಚಾರ ತಿಳಿಸಿದ ರಾಮಕೃಷ್ಣರೆಡ್ಡಿ ಮತ್ತು ದೇವರೆಡ್ಡಿ ರವರ ಮುಖ ಪರಿಚಯ ಆರೋಪಿಗಳಿಗೆ ಇದೆಯೇ ಎಂದರೆ ನನಗೆ ಗೊತ್ತಿಲ್ಲ. 2, 3, 7 ರಿಂದ 10 ಆರೋಪಿಗಳನ್ನು ನನ್ನ ಮದುವೆಯಾದಗಿನಿಂದಲೂ ನೋಡಿರುತ್ತೇನೆ. 2, 3, 7, 8 ಮತ್ತು 10 ನೇ ಆರೋಪಿತರು ಆನೇಕಲ್ ನಲ್ಲಿ ವಾಸ ಮಾಡುವುದಿಲ್ಲ ಎಂದರೆ ಸಾಕ್ಷಿ 7

ಮತ್ತು 8 ರವರ ಆನೇಕಲ್ ನಲ್ಲಿ ವಾಸ ಮಾಡುತ್ತಿದ್ದಾರೆ, 2 ಮತ್ತು 3 ನೇ ಆರೋಪಿಗಳು ರಾಚಮಾನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ, 9 ಮತ್ತು 10 ನೇ ಆರೋಪಿ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದು ನುಡಿದಿರುತ್ತಾರೆ.

**ಈಗ ಸಮಯ 02-00 ಗಂಟೆಯಾದ್ದರಿಂದ, ವಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ :-** | **510/2011** |
| **ಸಿ.ಡಬ್ಲ್ಯೂ : -1** | **ಪಿ.ಡಬ್ಲ್ಯೂ - 1** |
| **ದಿನಾಂಕ :-** | **31.07.2026** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲುಃ 1 ರಿಂದ 3 ಮತ್ತು 7 ರಿಂದ 10 ನೇ ಆರೋಪಿಗಳ ಪರ ಶ್ರೀ.ಎಸ್‌ವಿಎಂ ವಕೀಲರಿಂದ**

ದಿನಾಂಕಃ 24.06.2020 ರಂದು ನನ್ನ ಮತ್ತು 1 ನೇ ಆರೋಪಿಯ ನಡುವೆ ವಿಚ್ಛೇದನ ಡಿಕ್ರಿ ಆಗಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ದಿನಾಂಕಃ 02.08.2011 ರಿಂದ ನನಗೆ ಹಾಗೂ ನನ್ನ ಮಗಳಿಗೆ ಜೀವನಾಂಶ 1 ನೇ ಆರೋಪಿ ಕೊಡುತ್ತಿದ್ದಾರೆ ಎಂದರೆ ಸಾಕ್ಷಿ ತಿಂಗಳ ತಿಂಗಳ ಕೊಡುತ್ತಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕಃ 09.02.2004 ರಂದು 4 ನೇ ಆರೋಪಿ ಸ್ಟಿಫನ್ ಬಾಬು ಎಂಬುವವರನ್ನು ಮದುವೆಯಾಗಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ತಡವಾಗಿ ತಿಳಿಯಿತು ಎಂದು ನುಡಿದಿರುತ್ತಾರೆ.

ನಾನು ಮತ್ತು 1 ನೇ ಆರೋಪಿ ಮದುವೆಯಾದ ನಂತರ ರಾಚಮಾನಹಳ್ಳಿಯಲ್ಲಿ ವಾಸವಾಗಿದ್ದೇವು. ದಿನಾಂಕಃ 11.02.2006 ರಿಂದ ನಾನು ನನ್ನ ತವರು ಮನೆಯಲ್ಲಿ ವಾಸವಿದ್ದೇನೆಂದು ಪಿರ್ಯಾದಿಯಲ್ಲಿ ಹೇಳಿದ್ದೇನೆ ಎಂದರೆ ಸರಿ. 1 ನೇ ಆರೋಪಿ 4 ನೇ ಆರೋಪಿಯನ್ನು ಮದುವೆಯಾದ ವಿಚಾರ ತಿಳಿದ ತಕ್ಷಣ ನಾನು 1 ನೇ ಆರೋಪಿಯ ಮನೆಗೆ ಹೋಗಿ ವಿಚಾರ ಮಾಡಬಹುದಿತ್ತು ಎಂದರೆ ಸಾಕ್ಷಿ ನನಗೆ ಭಯವಿದ್ದ ಕಾರಣ ನಾನು ಹೋಗಿಲ್ಲ ಎಂದು ನುಡಿದಿರುತ್ತಾರೆ. ಆ ವಿಚಾರ ನನ್ನ ಪಿರ್ಯಾದಿಯಲ್ಲಿ ಹೇಳಿಲ್ಲ ಎಂದರೆ ಸರಿ. 1 ನೇ ಆರೋಪಿ 4 ನೇ ಆರೋಪಿಯನ್ನು ಮದುವೆ ಆಗಿರುವ ಬಗ್ಗೆ ಬಾಯಿ ಮಾತಿನ ಮಾತು ಹೊರತುಪಡಿಸಿ ಬೇರೆ ಏನಾದರೂ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ.

**(ಮುಂದುವರೆದ ವಾಟೀ ಸವಾಲಿಗೆ ಕಾಲಾವಕಾಶ ಕೇಳಲಾಗಿ, ಸಮಯ ನೀಡಿ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**